## ಬೆಳದಿಂಗಳ ರಾತ್ರಿ

ಕನಸುಗಳಲಿ ಮುಳುಗಿದ ರಾತ್ರಿಯ ಎರಡನೇ ಪಹರೆಗಿಂತ
ಮೊದಲನೇ ಪಹರೆ ಇನ್ನೂ ಅದ್ಭುತ
ಬೆಳದಿಂಗಳನೇ ಮುಡಿದ ನಡುರಾತ್ರಿ ಸ್ವಪ್ನಗಳು ಕರಗುತ್ತಿವೆ ಕಪ್ಪು ಹೊಗೆಯಂತೆ

ಕಾದು ಬಸವಳಿದ
ಮುನ್ನೂರು ಶುಭಗಳಿಗೆಗಳು ಕಳೆದು ಹೋದವು



ದಗ ದಗಿಸುವ ಬಿರು ಬಿಸಿಲಿನಲ್ಲೂ
ತೆರೆಯದ ನೀಲಿ ಕಣ್ಣುಗಳು
ಪದೇ ಪದೇ ಬೀಳುವ ಅದೇ ಕನಸಿನಿಂದ
ತಪ್ಪಿಸಿಕೊಳ್ಳಲಾರದೆ
ಮೆಲ್ಲಮೆಲ್ಲನೆ ರೆಪ್ಪೆ ಬಿಚ್ಚುತ್ತಿವೆ

ಕಾಲ ಬಂಧಿಯಾಗಿದೆ ಕನಸುಗಳಲ್ಲಿ
ದಿನ ವಾರ ತಿಂಗಳು ವರುಷಗಳೇ ಗತಿಸಿದರು ಅದೇ ಪ್ರಶ್ನೆ
ಯಾವ ದನಿ ಮಾರ್ದನಿಯಲ್ಲೂ ನನಗಾಗಿ ಒಂದು ಸ್ವರವಿಲ್ಲ
ನಾನಂದು ಬರೆಯಲಾಗದ ಕವಿತೆಗಳನ್ನೇ
ಸ್ವಪ್ನಗಳಿಂದು ಮತ್ತೆ ಮತ್ತೆ ಕೇಳಲು ಇಚ್ಛಿಸುತ್ತಿವೆ

## ಇನ್ನೂ ಬಾಕಿ ಇದೆ

ಕಾಲವು ವಿಶ್ವದಂಚಿಗೆ ತಂದು ನನ್ನ ನಿಲ್ಲಿಸಿಬಿಟ್ಟಿದೆ
ಬೂದು ಬಣ್ಣದ ಬಿಳಿ ಮೋಡಗಳ ನಡುವೆ
ಒಂದು ಒಲವಿನ ಚುಕ್ಕೆ ಮಿನುಗುವುದು
ಇನ್ನೂ ಬಾಕಿ ಇದೆ

## ನಡುಕ

ಮಂಕಾದ ಬತ್ತಿ
ನಡುಗುತ್ತ
ಬೆಳಕಿನ ಸೋರಿಕೆಯ ಭೀತಿಯಲ್ಲಿ
ಬರೆದುಕೊಂಡಿರುವ ಚಿತ್ರ

ಅನಿಶ್ಚಿತ ಅಸ್ತಿತ್ವ

